**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ. ಎಫ್.ಸಿ ನ್ಯಾಯಾಲಯ ಆಳಂದ**

**ಸಿ.ಸಿ. ನಂ. 2410/2025**

ಪಿರ್ಯಾದಿ ಕರ್ನಾಟಕ ಸರ್ಕಾರದ ಪರ
ಪಿ.ಎಸ್.ಐ ಮಾದನಹಿಪ್ಪರಗಾ ಪೋಲಿಸ್ ಠಾಣೆ

ವಿರುದ್ಧ

ಆರೋಪಿತರು 1. ಕರಬಸಪ್ಪಾ ತಂದೆ ಶಿವಲಿಂಗಪ್ಪಾ ಢಗೆ,
ವಯಃ32 ವರ್ಷ, ಉಃ ಚಾಲಕ,
ಸಾಃ ಖಜೂರಿ ತಾಃ ಆಳಂದ
ಜಿಃ ಕಲಬುರಗಿ.

**ದಂಡ ಪ್ರಕ್ರೀಯಾ ಸಂಹಿತೆ ಕಲಂ 313 ರ ಅಡಿ ಆರೋಪಿಗಳ ಹೇಳಿಕೆ**

ಪ್ರಶ್ನೆ 1 ನ್ಯಾಯಾಲಯದ ಮುಂದೆ ಅಭಿಯೋಜನೆ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ ಆರೋಪಿ.ಕೇಳಿದ್ದೇನೆ

ಪ್ರಶ್ನೆ 2. **ಸಿ.ಡಬ್ಲ್ಯೂ. 19. ಪಿ.ಡಬ್ಲ್ಯೂ. 6 ಮಲ್ಲಪ್ಪಾ ತಂದೆ ಶಿವಶರಣಪ್ಪಾ ದುರ್ಗಾ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು 2022 ರಿಂದ ಇಲ್ಲಿಯವರೆಗೆ ಮಾದನ ಹಿಪ್ಪರಗಾ ಪೋಲಿಸ್ ಠಾಣಯೆಯಲ್ಲಿ ಮುಖ್ಯ ಪೇದೆ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 25.12.2024 ರಂದು ಸಾಃ 06.30 ಗಂಟೆಗೆ ನಾನು ಠಾಣಾಧಿಕಾರಿಯ ಕರ್ತವ್ಯದಲ್ಲಿ ಇದ್ದಾಗ ಚಾಸ-1ರವರು ನೀಡಿದ ದೂರಿನ ಆಧಾರದ ಮೇಲೆ ಠಾಣಾ ಗುನ್ನಾ ಸಂಖ್ಯೆ 61/2024 ಅಂತಾ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಚಾಸಾ-16 ರವರ ಮುಖಾಂತರ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ, ದಿಃ 26.12.2024 ರಂದು ಕಲಂ 106 ಬಿ.ಎನ್.ಎಸ್ ಅಳವಡಿಸಿಕೊಳ್ಳಲು ನ್ಯಾಯಾಲಯಕ್ಕೆ ಮನವಿ ಪತ್ರ ಕಳುಹಿಸಿರುತ್ತೇನೆ. ಅದೇ ದಿನ ಮುಂದಿನ ತನಿಖೆಗಾಗಿ ಚಾಸ-20ರವರಿಗೆ ಕಡತವನ್ನು ಸಲ್ಲಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ, ನೀವೇನು ಹೇಳುತ್ತೀರಿ?

ಉತ್ತರಃ ಆರೋಪಿ.ಸುಳ್ಳು

ಪ್ರಶ್ನೇ 3- **ಸಿ.ಡಬ್ಲ್ಯೂ.20. ಪಿ. ಡಬ್ಲ್ಯೂ. 7, ಶಾಂತಪ್ಪಾ ತಂದೆ ನಿಂಗಪ್ಪಾ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು 15.08.2024 ರಿಂದ ಇಲ್ಲಿಯವರೆಗೆ ಮಾದನ ಹಿಪ್ಪರಗಾ ಪೋಲಿಸ್ ಠಾಣಯೆಯಲ್ಲಿ ಎ.ಎಸ್.ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 26.12.2024 ರಂದು ಚಾಸ-19 ರವರ ಕಡೆಯಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ಅದೇ ದಿನ ನಾನು ಮತ್ತು ಚಾಸ-17ರವರು ಸೇರಿಕೊಂಡು ಮೃತ ಪರಮೇಶ್ವರವರ ಶವ ಪಂಚನಾಮೆಯನ್ನು ಚಾಸ-3 ಮತ್ತು 4 ರವರ ಸಮಕ್ಷಮದಲ್ಲಿ ಬೆ. 08.00

ರಿಂದ 09.00 ಗಂಟೆಯವರೆಗೆ ಪಂಚನಾಮೆ ಮಾಡಿ ಒಂದು ಭಾವಚಿತ್ರವನ್ನು ತೆಗೆದುಕೊಂಡಿರುತ್ತೇನೆ. ಚಾಸ-17 ರವರಿಗೆ ಶವ ಬೆಂಗಾವಲ ಕರ್ತವ್ಯಕ್ಕೆ ನೇಮಕ ಮಾಡಿರುತ್ತೇನೆ. ಅದೇ ದಿನ ವೈದ್ಯಾಧಿಕಾರಿಗಳಿಗೆ ಶವ ತನಿಖಾ ವರದಿಯನ್ನು ನೀಡುವ ಕುರಿತು ಅರ್ಜಿ ಸಲ್ಲಿಸಿರುತ್ತೇನೆ. ಅದೇ ದಿನ ಚಾಸ-1ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಚಾಸ-21ರವರಿಗೆ ಕಡತವನ್ನು ಸಲ್ಲಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ ಆರೋಪಿ.ಸುಳ್ಳು

ಪ್ರಶ್ನೆ 4- **ಸಿ.ಡಬ್ಲ್ಯೂ.21, ಪಿ. ಡಬ್ಲ್ಯೂ. 8 ಪ್ರಕಾಶ ತಂದೆ ರೇವಣಸಿದ್ದಪ್ಪಾ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು ಅಕ್ಟೋಬರ್ 2023 ರಿಂದ ನವೆಂಬರ್ 2025 ರವರೆಗೆ ಸಿ.ಪಿ.ಐ ಆಳಂದ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 26.12.2024 ರಂದು ಚಾಸಾ-20 ರವರ ಕಡೆಯಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ ಅದೇ ಘಟನಾ ಸ್ಥಳಕ್ಕೆ ಭೇಟಿ ಕೊಟ್ಟು ಚಾಸ-1ರವರು ತೋರಿಸಿದ ಸ್ಥಳದಲ್ಲಿ ಚಾಸ-5 ಮತ್ತು 6 ರವರ ಸಮಕ್ಷಮ ಸಾ.04.00 ರಿಂದ 05.00 ಗಂಟೆಯವರೆಗೂ ಪಂಚನಾಮೆ ಮಾಡಿ ಸ್ಥಳದಿಂದ ಒಂದು ಮೋಟಾರು ಸೈಕಲ ನಂಬರ್ ಕೆ.ಎ. 32/ಎಚ್.ಇ-7916 ವಾಹನವನ್ನು ಜಪ್ತಿಪಡಿಸಿಕೊಂಡು ಸ್ಥಳದಲ್ಲಿ ಒಂದು ಭಾವ ಚಿತ್ರವನ್ನು ತೆಗೆದುಕೊಂಡಿರುತ್ತೇನೆ. ನಂತರ ನಮ್ಮ ಸಿಬ್ಬಂದಿಯಾದ ಬಸವರಾಜ ಸಿ.ಪಿ.ಸಿ 417ರವರ ಕಡೆಯಿಂದ ಕಲಂ 63(4) ಅಡಿಯಲ್ಲಿ ಪ್ರಮಾಣ ಪತ್ರವನ್ನು ತೆಗೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-9 ಮತ್ತು 10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ, ದಿಃ 27.12.2024 ರಂದು ಚಾಸ-2,3 ಮತ್ತು 11 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸ-16ರವರ ಕಡೆಯಿಂದ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 06.01.2025 ರಂದು ಚಾಸ-18ರವರು ಹಾಜರುಪಡಿಸಿದ ವಾಹನ ಸಂಖ್ಯೆ ಕೆ.ಎ. 17/ಎಮ್-3563ಯನ್ನು ಚಾಸಾ-7 ಮತ್ತು 8 ರವರ ಸಮಕ್ಷಮ ಜಪ್ತಿಪಡಿಸಿಕೊಂಡು ಮ. 2.00 ರಿಂದ 3.00 ಗಂಟೆಯವರೆಗೆ ಜಪ್ತಿ ಪಂಚನಾಮೆ ಮಾಡಿ ಒಂದು ಭಾವಚಿತ್ರವನ್ನು ತೆಗೆದುಕೊಂಡಿರುತ್ತೇನೆ. ದಿಃ 09.01.2025 ರಂದು ಚಾಸ-1 ರಿಂದ 3,9 ರಿಂದ 11ರವರ ಪುರವಣಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿಯು ಠಾಣೆಗೆ ಬಂದು ಹಾಜರಾದ ಕಾರಣ ದಸ್ತಗೀರ ನಿಯಮ ಪಾಲಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 06.02.2025 ರಂದು ಐ.ಎಮ್.ಐ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 07.02.2025 ರಂದು ಮೃತನ ಪಿ.ಎಮ್.ಎ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 13.03.2025 ರಂದು ಚಾಸಾ-2ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ದಿಃ 09.01.2025 ಮತ್ತು ದಿಃ 18.01.2025 ರಂದು ಪ್ರಕರಣದಲ್ಲಿ ಭಾಗಿಯಾದ ವಾಹನಗಳ ಮಾಲೀಕರಿಂದ ವಾಹನಗಳ ದಾಖಲಾತಿಗಳನ್ನು ಮತ್ತು ಇಂಡೆಮಿನಿಟಿ ಬಾಂಡ್‌ಗಳನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ. ದಿಃ 13.03.2025 ರಂದು ತನಿಖೆ

ಪೂರ್ಣಗೊಂಡ ಕಾರಣ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ?

ಉತ್ತರಃ ಆರೋಪಿ. ಸುಳ್ಳು

ಪ್ರಶ್ನೆ 5- ನೀವು ಏನನ್ನಾದರೂ ಹೇಳ ಬಯಸುವೀರಾ?

ಉತ್ತರಃ ಆರೋಪಿ. ಏನು ಇಲ್ಲ

ಪ್ರಶ್ನೆ 6- ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?

ಉತ್ತರಃ ಆರೋಪಿ. ಇಲ್ಲ

(ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವನು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ಧೃಡೀಕರಿಸಲಾಗಿದೆ.)

**ಸಿ.ಸಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ.**